ಅಸಲು ದಾವಾ ಸಂಖ್ಯೆ- 168/2015
ಪಿಡಬ್ಲ್ಯೂ- 02
ದಿನಾಂಕಃ 18.02.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು - ಶ್ರೀ ಎನ್ ಎಸ್ ಪಿ ವಕೀಲರಿಂದ.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನನ್ನ ಅಣ್ಣ ಮಾಹಿತಿ ಕೊಟ್ಟಿದ್ದಾರೆ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ನನ್ನ ಹೆಂಡತಿ ಎಂದರೆ ಸರಿ. ದಾವಾ ಆಸ್ತಿ ನಂ.ವಿಪಿಸಿ ನಂ.210 ಮತ್ತು 210/ಎ ಇರುತ್ತವೆ. ಆಸ್ತಿ ನಂ.210 ಮೂಲತಃ ಫಕ್ಕೀರಯ್ಯ ಗದಿಗೆಯ್ಯ ಕಲ್ಮಠ ಇವರಿಗೆ ಸೇರಿದ್ದು ಇತ್ತು. ನಾವು 3 ಜನ ಸಹೋದರರು. ದೊಡ್ಡಲಾಡಸಾಬ ನನ್ನ ತಂದೆಯ ತಂದೆ. ದೊಡ್ಡಲಾಡಸಾಬ ಇವನ ಸಹೋದರ ಸಣ್ಣಲಾಡಸಾಬ ಎಂದರೆ ನಾನು ನೋಡಿಲ್ಲ. ಪ್ರತಿವಾದಿಯರ ತಂದೆ ಸಣ್ಣಲಾಡಸಾಬ ಇವರ ಮಗ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣನಾದ ಚಮನಸಾಬ ದಿನಾಂಕಃ 31.05.1984 ರಂದು ದಾವಾ ಆಸ್ತಿಯನ್ನು ಖರೀದಿ ಹಿಡಿದಿದ್ದಾರೆ. ದಾವಾ ಆಸ್ತಿಗಳನ್ನು ನನ್ನ ಅಣ್ಣ ತನ್ನ ಸ್ವಂತಕ್ಕೆ ಹಿಡಿದಿದ್ದಾನೆ. ಖರೀದಿ ಪತ್ರವನ್ನು ನಾನು ಓದಿ ನೋಡಿದ್ದೇನೆ. ಖರೀದಿ ಪತ್ರದಲ್ಲಿ ಅವಿಭಕ್ತ ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಮತ್ತು ಪ್ರತಿವಾದಿಯರಿಗೆ ಸಾಮೂಹಿಕ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ವಿಸ್ತೀರ್ಣ ತಲಾ ಒಂದೂವರೆ ಗುಂಟೆ ಇರುತ್ತವೆ. ವಿಪಿಸಿ ನಂ.210 ರ ಚಕಬಂದಿ ಪೂರ್ವಕ್ಕೆ ವಿಪಿಸಿ ನಂ.211, ಪಶ್ಚಿಮಕ್ಕೆ ಚಮನಸಾಬ ಸಣ್ಣಲಾಡಸಾಬ ನದಾಫ ಇತನ ಆಸ್ತಿ, ಉತ್ತರ-ದಕ್ಷಿಣಕ್ಕೆ ಸರಕಾರಿ ರಸ್ತೆ. ವಿಪಿಸಿ ನಂ.210/ಎ ರ ಚಕಬಂದಿ ಪೂರ್ವಕ್ಕೆ ವಿಪಿಸಿ ನಂ.211, ಪಶ್ಚಿಮಕ್ಕೆ ವಿಪಿಸಿ ನಂ.210, ಉತ್ತರ ಮತ್ತು ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ.

1 ಮತ್ತು 2 ನೇ ವಾದಿಯರ ಆಸ್ತಿಗಳು ಯಾವ ಯಾವವು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ನೇ ವಾದಿಗೆ ಆಸ್ತಿ ವಿಪಿಸಿ ನಂ.210, 2 ನೇ ವಾದಿಗೆ ವಿಪಿಸಿ ನಂ.210 ಎ, ಇದೆ ಎಂದು ನುಡಿಯುತ್ತಾರೆ. 1 ನೇ ವಾದಿ ಯಾವ ಭಾಗದಲ್ಲಿ ಮತ್ತು 2 ನೇ ವಾದಿ ಯಾವ ಭಾಗದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಕುಟುಂಬ ವ್ಯವಸ್ಥಾಪನೆ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಚಮನಸಾಬ ವಾದಿಯರಿಗೆ 2013 ರಲ್ಲಿ ಬಿಟ್ಟುಕೊಟ್ಟಿದ್ದಾನೆ. ಹಕ್ಕು ಬಿಟ್ಟ ಪತ್ರ ನೊಂದಣಿ ಆಗಿಲ್ಲ ಎಂದರೆ ಸರಿ . ವಾದಿಯರ ಹೆಸರು ಯಾವ ಆಧಾರದ ಮೇಲೆ ದಾಖಲಾದವು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಚಮನಸಾಬ ಇತನ ಖರೀದಿಪತ್ರದ ಆಧಾರದ

ಮೇಲೆ ದಾಖಲಾಗಿವೆ ಎಂದು ನುಡಿಯುತ್ತಾರೆ. ನಾನು ಹೇಳಿದ ರೀತಿ ಚಮನಸಾಬ ಇತನ ಖರೀದಿ ಪತ್ರದ ಆಧಾರದ ಮೇಲೆ ವಾದಿಯರ ಹೆಸರು ದಾಖಲಾಗಿಲ್ಲ ಎಂದರೆ ಸರಿಯಲ್ಲ . ಹಕ್ಕುಬಿಟ್ಟ ಪತ್ರವನ್ನು ದಿನಾಂಕಃ 09.02.2013 ರಂದು ಬರೆದುಕೊಡಲಾಗಿದೆ. ಆಗ ವಾದಿಯರು, ನಾನು, ಮೌಲಾಸಾಬ, ಅಕ್ಬರಸಾಬ, ಮಹಮ್ಮದಸಾಬ, ಶಿವಪ್ಪ ಹಾಜರಿದ್ದರು. ಹಕ್ಕುಬಿಟ್ಟ ಪತ್ರವನ್ನು ವೀರಪ್ಪ ಉಪ್ಪಿನ ಎನ್ನುವವರು ಬರೆದಿದ್ದಾರೆ. ಸದರಿ ಹಕ್ಕುಬಿಟ್ಟ ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಉಳಿದವರು ಸಹಿ ಮಾಡಿರುತ್ತಾರೆ. ಹಕ್ಕುಬಿಟ್ಟ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಹಕ್ಕುಬಿಟ್ಟ ಪತ್ರ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಚಮನಸಾಬ ಜೀವಂತವಾಗಿದ್ದಾರೆ ಎಂದರೆ ಸರಿ.

ಪ್ರತಿವಾದಿಯರ ಸಹೋದರ ಶಹಜಾನ್ ಎನ್ನುವವರು ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ಅಣ್ಣ ಚಮನಸಾಬ ಪ್ರತಿವಾದಿಯರ ಸಹೋದರನಾದ ಶಹಜಾನ್ ಇತನಿಂದ 2000 ನೇ ಸಾಲಿನಲ್ಲಿ ವಿಪಿಸಿ ನಂ.210 ನ್ನು ರೂ.19000/- ಗಳಿಗೆ ಹಕ್ಕು ಬಿಟ್ಟು ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಶಹಜಾನ್ ಮರಣ ಹೊಂದಿದ ನಂತರ ಚಮನಸಾಬ, ಪ್ರತಿವಾದಿಯರಿಗೆ 2012 ನೇ ಸಾಲಿನಲ್ಲಿ ಹೆಚ್ಚುವರಿಯಲ್ಲಿ ರೂ.11000/-ಗಳನ್ನು ಪಡೆದು ಹಕ್ಕು ಬಿಟ್ಟು ಪತ್ರ ಬರೆದು ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಆಸ್ತಿ ನಂ.210 ರ ಪಶ್ಚಿಮ ಭಾಗಕ್ಕೆ ಪಿರಾನಬಿ ಜಹಾಂಗೀರಸಾಬ ನದಾಫ ಇವರಿಗೆ ಒಂದೂವರೆ ಗುಂಟೆ ಹಾಗೂ ಪೂರ್ವ ದಿಕ್ಕಿಗೆ 2 ನೇ ಪ್ರತಿವಾದಿಗೆ ಒಂದೂವರೆ ಗುಂಟೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಇಬ್ಬರಿಗೂ ಪಂಚರ ಸಮಕ್ಷಮ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2000 ನೇ ಸಾಲಿನಿಂದ ಇವತ್ತಿನವರೆಗೂ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.